**ದಿನಾಂಕಃ 05-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಪಿ.ವಿ.ಕೆ. ವಕೀಲರಿಂದಃ**

5 ನೇ ಪ್ರತಿವಾದಿ ಕಾಳಾಚಾರಿ ನನ್ನ ತಂದೆ ಎಂದರೆ ನಿಜ. ಈ ದಾವೆಯಲ್ಲಿ ತಕರಾರು ಸಲ್ಲಿಸಲು ವಕೀಲರಿಗೆ ಯಾರು ಮಾಹಿತಿ ಕೊಟ್ಟಿದ್ದಾರೆ ಎಂದರೆ ನನ್ನ ತಂದೆ ಹಾಗೂ ನನ್ನ ಅಣ್ಣ ಮಾಹಿತಿ ಕೊಟ್ಟಿದ್ದಾರೆ. ತಕರಾರಿನಲ್ಲಿ ಹೇಳಿರುವ ಅಂಶಗಳನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಓದಿರುತ್ತೇನೆ. ನನ್ನ ಜನ್ಮ ದಿನಾಂಕ 12-07-1981 ರಂದು ಆಗಿದೆ. 1981 ರವರೆಗೆ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಏನೇನು ವ್ಯವಹಾರಗಳು ಆಗಿವೆ ಎಂಬ ವಿಚಾರಗಳ ಕುರಿತು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಇದೆ. ಮೂಲಪುರುಷ ಭರಮಪ್ಪ ಯಾವಾಗ ಮೃತಪಟ್ಟಿದ್ದಾರೆ ಎಂದರೆ 1934 ರಲ್ಲಿ ಮೃತಪಟ್ಟಿದ್ದಾರೆ. ಮಲ್ಲಪ್ಪ ಯಾವಾಗ ಮೃತಪಟ್ಟಿದ್ದಾರೆ ಎಂದರೆ 1941 ರಲ್ಲಿ ಮೃತಪಟ್ಟಿದ್ದಾರೆ. 1934 ರಲ್ಲಿ ಮೂಲ ಪುರುಷ ಭರಮಪ್ಪ ಮೃತಪಟ್ಟ ನಂತರ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದರು ಎಂದು ನೀವು ನೋಡಿದ್ದೀರಾ ಎಂದರೆ ಇಲ್ಲ ಆದರೆ ನನಗೆ ಮಾಹಿತಿ ಇದೆ.

2. ಮೂಲ ಪುರುಷ ಭರಮಪ್ಪ ಮೃತಪಟ್ಟ ನಂತರ ದಾವಾ ಆಸ್ತಿಗಳು ಯಾರ ಹೆಸರಿನಲ್ಲಿತ್ತು ಎಂದರೆ ಆತನ 1 ನೇ ಮಗ ಮಲ್ಲಪ್ಪ ಇತನ ಹೆಸರಿನಲ್ಲಿತ್ತು. ಮಲ್ಲಪ್ಪನ ಹೆಸರಿಗೆ ಖಾತೆ ವರ್ಗಾವಣೆ ಆಗುವುದಕ್ಕಿಂತ ಪೂರ್ವದಲ್ಲಿ ಯಾರ ಹೆಸರು ಇತ್ತು ಎಂದರೆ ಮೂಲ ಪುರುಷ ಭರಮಪ್ಪನ ಹೆಸರಿನಲ್ಲಿತ್ತು. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ನಾಗಪ್ಪನ ಹೆಸರು ಯಾವಾಗ ನಮೂದು ಆಯಿತು ಎಂದರೆ ಮಲ್ಲಪ್ಪ ಮೃತಪಟ್ಟ ನಂತರ ನಾಗಪ್ಪನ ಹೆಸರಿಗೆ ಖಾತೆ ಬಂದಿದೆ. ನಾಗಪ್ಪನ ಹೆಂಡತಿ ಹೆಸರು ಎನು ಎಂದರೆ ಸಾವಮ್ಮ. ನಾಗಪ್ಪ ಮತ್ತು ಸಾವಮ್ಮ ರವರಿಗೆ ಒಬ್ಬ ಮಗನಿದ್ದು ಆತನ ಹೆಸರು ಭರಮಪ್ಪ ಎಂದರೆ ನಿಜ. ಭರಮಪ್ಪನ ಹೆಂಡತಿಯ ಹೆಸರು ಶೀಲಮ್ಮ ಎಂದರೆ ನಿಜ. ಶೀಲಮ್ಮ ಮೃತಪಟ್ಟಿದ್ದಾರೆ ಎಂದರೆ ನಿಜ.

3. ಸದರಿ ಶೀಲಮ್ಮ ಮತ್ತು ಭರಮಪ್ಪ ರವರಿಗೆ 9 ರಿಂದ 12 ನೇ ಪ್ರತಿವಾದಿಗಳು ಹಾಗೂ ಕೊಂತೆವ್ವ ರವರು ಮಕ್ಕಳು ಆಗಿದ್ದಾರೆ ಎಂದರೆ ನಿಜ. ಕೊಂತೆವ್ವ ಈ ದಾವೆಯಲ್ಲಿ 13 ನೇ ಪ್ರತಿವಾದಿ ಎಂದರೆ ನಿಜ. ಈರಪ್ಪನ ಹೆಂಡತಿ ಗುರುಬಸಮ್ಮ. ಇವರಿಗೆ 4 ಮತ್ತು 5 ನೇ ಪ್ರತಿವಾದಿಯರು ಅವರ ಮಕ್ಕಳಾಗಿದ್ದಾರೆ ಎಂದರೆ ನಿಜ. ಈರಪ್ಪನಿಗೆ 4 ಮತ್ತು 5 ನೇ ಪ್ರತಿವಾದಿಯರನ್ನು ಹೊರತುಪಡಿಸಿ ಕಮಲಮ್ಮ ಎಂಬ ಮಗಳು ಇದ್ದಾಳೆ ಎಂದರೆ ನಿಜ. ಕಮಲಮ್ಮ ರವರನ್ನು ಗುಡ್ಡಾಚಾರಿ ನಾಗೇನಹಳ್ಳಿ ರವರಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ

ನಿಜ. ಕಮಲಮ್ಮ ಎಂದರೆ ಈ ಕೇಸಿನ 1 ನೇ ವಾದಿ ಎಂದರೆ ನಿಜ. ತುಂಗಮ್ಮ ಎಂಬುವವರು 2000 ನೇ ಇಸವಿಯಲ್ಲಿ ನಮ್ಮ ಊರಿನಲ್ಲಿ ಮೃತಪಟ್ಟಿದ್ದಾರೆ ಎಂದರೆ ನಿಜ. ಅವರ ತಂದೆಯ ಹೆಸರು ಗೊತ್ತಿದೆಯಾ ಎಂದರೆ ಇಲ್ಲ. ಅದೇ ರೀತಿ ಅವರ ತಾಯಿಯ ಹೆಸರು ಗೊತ್ತಿದೆಯಾ ಎಂದರೆ ಇಲ್ಲ. ತುಂಗಮ್ಮ ಮೃತಪಡುವ ಕಾಲದವರೆಗೆ ನಮ್ಮ ಊರಿನಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯೂ ಮುಂದುವರೆದು ತುಂಗಮ್ಮ ರವರು ನಾಗೇನಹಳ್ಳಿಯಲ್ಲಿ ವಾಸವಾಗಿದ್ದರು.

4. ತುಂಗಮ್ಮ ರವರು ನಾಗೇನಹಳ್ಳಿಯಲ್ಲಿ ವಾಸವಾಗಿದ್ದಳು ಎಂದು ದಾಖಲೆಗಳನ್ನು ನೋಡಿದ್ದೀರಾ ಎಂದರೆ ನೋಡಿರುತ್ತೇನೆ. ಯಾವ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಆಕೆಯ ಶಾಲಾ ದಾಖಲೆಗಳನ್ನು ನೋಡಿರುತ್ತೇನೆ. ದಾಖಲೆಗಳನ್ನು ಆಕೆ ಬದುಕಿದ್ದಾಗ ನೋಡಿದ್ದೀರಾ ಅಥವಾ ಆಕೆ ಮೃತಪಟ್ಟಾಗ ನೋಡಿದ್ದೀರಾ ಎಂದರೆ ಆಕೆ ಬದುಕಿದ್ದಾಗಲೇ ನೋಡಿರುತ್ತೇನೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ತುಂಗಮ್ಮ ರವರಿಗೆ ಗುಡ್ಡಾಚಾರಿ ಮತ್ತು ಜಕಣಾಚಾರಿ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ನಿಜ. ಗುಡ್ಡಾಚಾರಿ ಹಾಗೂ ಜಕಣಾಚಾರಿ ಇಬ್ಬರು ನಮ್ಮ ಊರಾದ ಕರೂರು ಗ್ರಾಮದಲ್ಲಿ ವಾಸವಾಗಿದ್ದು ಅದೇ ಊರಿನಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯೂ ಅದೇ ಊರಿನಲ್ಲಿ ಮೃತಪಟ್ಟಿರುತ್ತಾರೆ ಆದರೆ ಅಲ್ಲಿ ವಾಸವಾಗಿರಲಿಲ್ಲ. ಗುಡ್ಡಾಚಾರಿ ಹಾಗೂ ಜಕಣಾಚಾರಿ ರವರು ಕರೂರಿನಲ್ಲಿ ವಾಸವಾಗಿದ್ದಂತಹ ಮನೆಯ ನಂಬರು ಏನು ಎಂದರೆ ನನಗೆ ಗೊತ್ತಿಲ್ಲ. ಗುಡ್ಡಾಚಾರಿ ಹಾಗೂ ಜಕಣಾಚಾರಿ ರವರು ನಾಗೇನಹಳ್ಳಿಯಲ್ಲಿ ವಾಸವಾಗಿದ್ದರು ಎಂದು ತೋರಿಸಲು ಅವರ ಮತದಾರರ ಪಟ್ಟಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ನನಗೆ ಅದರ ಅವಶ್ಯಕತೆ ಇಲ್ಲ.

5. ನಿ ಪಿ -15 ರಲ್ಲಿ ಮೂಲ ಪುರುಷ ಭರಮಪ್ಪ ಹಾಗೂ ಆತನ 1 ನೇ ಮಗ ಮಲ್ಲಪ್ಪ ಮೃತಪಟ್ಟ ನಂತರ ಅವಿಭಕ್ತ ಕುಟುಂಬದ ಸದಸ್ಯನಾಗಿ ನಾಗಪ್ಪನ ಹೆಸರು ಆಸ್ತಿಗಳಿಗೆ ಸಂಬಂದಪಟ್ಟಂತೆ ಹೆಸರು ದಾಖಲಾಗಿರುತ್ತದೆ ಎಂದರೆ ನಿಜ. ದಾವಾ ಆಸ್ತಿ ಐಟಂ ನಂ.3 ಆಸ್ತಿಯು ನಮ್ಮ ಕುಟುಂಬಕ್ಕೆ ಹೇಗೆ ಬಂತು ಎಂದರೆ ನಾಗಪ್ಪ ರವರು ತಿರಕಪ್ಪ ಕಮ್ಮಾರ, ಗುಡ್ಡಪ್ಪ ಕಮ್ಮಾರ ಇವರಿಂದ ಖರೀದಿ ಮಾಡಿರುತ್ತಾರೆ. ನನಗೆ ಈ ವಿಚಾರ ದಾಖಲೆಗಳ ಆಧಾರದ ಮೇಲೆ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯೂ ನನಗೆ ವೈಯಕ್ತಿಕವಾಗಿ ಮಾಹಿತಿ ಇರುತ್ತದೆ ಎಂದು ಹೇಳುತ್ತಾರೆ. ನಿ ಪಿ -22 ರ ಪ್ರಕಾರ ತುಂಗಮ್ಮ ರವರ ಗಂಡನ ಹೆಸರು ನಾಗೇಂದ್ರಪ್ಪ ಎಂದು ಇದ್ದು ಆತನು ದಿನಾಂಕ 01-08-2000 ನೇ ಇಸವಿಯಲ್ಲಿ ಮೃತಪಟ್ಟಿರುವುದಾಗಿ ನಮೂದು

ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ ತುಂಗಮ್ಮ ಮಾತ್ರ ನನಗೆ ಗೊತ್ತು. ವಾದಿ ಈ ಕೇಸಿನಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದ್ದೀರಾ ಎಂದರೆ ನೋಡಿರುತ್ತೇನೆ.

6. ದಾವಾ ಆಸ್ತಿಗಳ ಕುರಿತು 1955 ನೇ ಇಸವಿಯಲ್ಲಿ ಪಾಲು ವಿಭಾಗ ಆಗಿದೆ ಎಂದು ಹೇಳುವ ಕಾಲದಲ್ಲಿ ಆ ಮಾತುಕತೆಗೆ ನೀವು ಭಾಗವಹಿಸಿದ್ದರೇ ಎಂದರೆ ಇಲ್ಲ. ಸಾಕ್ಷಿಯೂ ಮುಂದುವರೆದು ನನ್ನ ತಂದೆ ಹಾಗೂ ನನ್ನ ಅಣ್ಣ ನನಗೆ ಮಾಹಿತಿ ಕೊಟ್ಟಿದ್ದಾರೆ. ಆ ಪಾಲು ವಿಭಾಗದಲ್ಲಿ ಎಷ್ಟು ಆಸ್ತಿಗಳು ವಿಭಜನೆ ಆಯಿತು ಎಂದರೆ 10 ಆಸ್ತಿಗಳ ಕುರಿತು ಹಿಸ್ಸೆಗಳು ಆಗಿರುತ್ತವೆ. ಅವುಗಳ ಸರ್ವೆ ನಂಬರು ಎನು ಎಂದರೆ ಸರ್ವೆ ನಂ.95/2, 96/1,80/2,81/3,81/2 ಈ ಆಸ್ತಿಗಳು ಭರಮಪ್ಪನ ಎರಡನೇ ಮಗ ನಾಗಪ್ಪನ ಹಿಸ್ಸೆಗೆ ಹೋಗಿರುತ್ತದೆ. ಸರ್ವೆ ನಂ.95/1,96/2,80/1 ಈ ಆಸ್ತಿಗಳು ಮಲ್ಲಪ್ಪನ 1 ನೇ ಮಗ ನಿಂಗಪ್ಪ, ಈರಪ್ಪ, ಮನುವಾಚಾರಿ ಇವರಿಗೆ ಬಂದಿರುತ್ತದೆ. ಸರ್ವೆ ನಂ.167,168 ಆಸ್ತಿಗಳು ಮಲ್ಲಪ್ಪನ 2 ನೇ ಮಗ ಈರಪ್ಪ ಹಾಗೂ ಮೂಲ ಪುರುಷ ಭರಮಪ್ಪನ ಮಗ 2 ನೇ ಮಗ ನಾಗಪ್ಪನ ಹೆಸರಿಗೆ ಬಂದಿರುತ್ತದೆ.

7. ದಾವಾ ಆಸ್ತಿ ಐಟೆಂ ನಂ.11 ಆಸ್ತಿ ಮೂಲತಃ ಯಾವ ಆಸ್ತಿ ಎಂದರೆ ಪಿತ್ರಾರ್ಜಿತ ಆಸ್ತಿ. ಈ ಆಸ್ತಿ ಇವಾಗ ಯಾರ ಸ್ವಾಧೀನದಲ್ಲಿದೆ ಎಂದರೆ ಮೂಲ ಪುರುಷ ಭರಮಪ್ಪನ 2 ನೇ ಮಗ ನಾಗಪ್ಪ ಹಾಗೂ ಇತನ ಮಗ ಭರಮಪ್ಪ ರವರ ಸ್ವಾಧೀನದಲ್ಲಿದೆ. ದಾವಾ ಆಸ್ತಿ ಐಟೆಂ ನಂ.11 ಸ್ವತ್ತು ಈಗಲೂ ಸಹ ಒಟ್ಟು ಕುಟುಂಬದಲ್ಲಿ ಇದೆ ಸದರಿ ಆಸ್ತಿಯ ಕುರಿತು ಪಾಲು ವಿಭಾಗ ಆಗಿಲ್ಲ ಎಂದರೆ ಪಾಲು ವಿಭಾಗ ಆಗಿರುತ್ತದೆ. ಈ ಆಸ್ತಿಯ ಕುರಿತು ಯಾವಾಗ ವಿಭಾಗ ಆಯಿತು ಎಂದರೆ 1955 ಕ್ಕಿಂತ ಪೂರ್ವದಲ್ಲಿ ಆಗಿರುತ್ತದೆ. 1955 ಕ್ಕಿಂತ ಪೂರ್ವದಲ್ಲಿ ಅಂದರೆ ಯಾವ ಇಸವಿಯಲ್ಲಿ ಆಯಿತು ಎಂದರೆ 1934 ರಿಂದ 1955 ನೇ ಇಸವಿಯ ಒಳಗೆ ಆಗಿರುತ್ತದೆ. ದಾವಾ ಆಸ್ತಿ ಐಟೆಂ ನಂ.11 ಕುರಿತು ಪಾಲು ವಿಭಾಗ ಆಗಿದೆ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಇದೆ.

<u>ಈ ಹಂತದಲ್ಲಿ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದುಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಬಿ.ಸಿದ್ದರಾಜು)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.